

ಮುಖದ ಮುಂದೆ ಬೀಸುತ್ತಾ ಅತ್ತಿತ್ತ ಕಣ್ಣಾಡಿಸಿದ. ನಿದ್ದೆ ಮಂಪರನ್ನು ಕದಡಿದ್ದಕ್ಕೆ ಆಟೋ ಕುಲುಕಾಟದ ಸದ್ದು ಕಾರಣವೆಂದೂ, ಜಾಗವಿಲ್ಲದಿದ್ದರೂ ಮುನ್ನುಗ್ಗಬೇಕೆಂಬ ವಾಹನಕುಲಗಳ ಭರಾಟೆಯು ಕಾರಣವೆಂದೂ ಅವನಿಗೆ ತಳಾರಕ್ಕೆ ತಿಳಿಯಿತು. ಆಟೋದ ತುದಿಯಲ್ಲಿ ಕೂತಿದ್ದ ಅವನೀಗ ಕಾಲು ಇಳೇಬಿಟ್ಟ. ಈ ಬಗೆಯ ಜನ, ವಾಹನ, ಸದ್ದು, ಹೊಗೆ, ಭರಾಟೆ, ಧಾವಂತ ಎಲ್ಲವೂ ತನ್ನ ಒಡನಾಡಿಗಳು ಎಂಬಂತೆ ಭಾವುಣಿಸುತ್ತಿದ್ದವನಿಗೆ ಈ ಒಡನಾಡಿಗಳ ಸಹವಾಸ ನಾಳೆಯಿಂದ ಇಲ್ಲ ಎಂಬುದು ಪುಳಕಗೊಳಿಸತೊಡಗಿತ್ತು. ಪಕ್ಕದಲ್ಲಿದ್ದ ಕಸದ ಚೀಲಕ್ಕೆ ಕಡು ಖುಷಿಯಿಂದ ತಟ್ಟಿದ. ಹಿಂಗೆ ಖುಷಿ ಉಕ್ಕಿದಾಗ ಪಕ್ಕದಲ್ಲಿದ್ದವನ ಬೆನ್ನಿಗೆ ಗುದ್ದಿಯೋ ಅಥವಾ ಎದುರಿನ ದನ, ಎಮ್ಮೆ, ಆಡು, ಕುರಿಗಳ ಹಿಂಭಾಗಕ್ಕೆ ತಟ್ಟಿಯೋ ಹರುಷ ಅನುಭವಿಸುವುದು ಅವನ ಬಾಲ್ಯದಿಂದ ಬಂದ ಹವ್ಯಾಸ. ಹಾಗೆ ತಟ್ಟಿದ ಜಾಗದಲ್ಲಿ ಗಟ್ಟಿ ಚೂರೊಂದು ಕೈಗೆ ತಡಕಿತು. ಚೀಲಕ್ಕೆ ಕೈ ತೂರಿಸಿ ಬೆರಳು ಸಂಧಿಯಿಂದ ಈಚೆಗೆ ಎಳೆದ. ಅದೊಂದು